ಕ್ರಮೇಣ ಸಮಾಜಕ್ಕೆ ಧಕ್ಕೆಯನ್ನುಂಟುಮಾಡಿ, ಉಳಿದ ಎಲ್ಲ ರೀತಿಯ ಕೆಡಕುಗಳು ಕೂಡ ಸಮಾಜದಲ್ಲಿ ಮರುಕಳಿಸುವಂತೆ ಮಾಡುತ್ತದೆ. ಇದಕ್ಕೆ ಇರುವ ಏಕೈಕ ಪರಿಹಾರವೆಂದರೆ ಮೌಲ್ಯಾಧಾರಿತ ಭಾವನೆಗಳನ್ನು ಶಿಕ್ಷಣಪದ್ಧತಿಯಲ್ಲಿ ಅಳವಡಿಸುವುದು. ಇದಕ್ಕೆಂದೇ ಸ್ವಾಮೀಜಿಯವರು 'ಮಾನವನಿರ್ಮಾಣ' ಅಥವಾ 'ಶೀಲನಿರ್ಮಾಣ'ವನ್ನು ಶಿಕ್ಷಣ ಪದ್ಧತಿಯಲ್ಲಿ ನಿಖರವಾಗಿ ಪ್ರತಿಪಾದಿಸುತ್ತಾರೆ. ಶಕ್ತಿಯುತ ನೈತಿಕಭಾವನೆಗಳು ವ್ಯಕ್ತಿಯೊಬ್ಬನಲ್ಲಿ ಬೆಳೆಯಲು ಅನುಕೂಲವಾದ ವಾತಾವರಣವನ್ನು ನಾವು ನಿರ್ಮಿಸಿಕೊಟ್ಟರೆ, ಜನರು ಒಳ್ಳೆಯ ಆಲೋಚನೆಗಳನ್ನು ಹೊಂದಲು ಅವಕಾಶವಾಗುತ್ತದೆ; ಆಗ ನೈತಿಕ ವಿಷಯಗಳಲ್ಲಿ ನಿರ್ಭೀತರಾಗಿ ಕಾರ್ಯಮಗ್ನರಾಗಲು ಹಾಗೂ ದೃಢ, ಯುಕ್ತ, ಯೋಗ್ಯವಾದ ನಿರ್ಣಯಗಳನ್ನು ಸಕಾಲದಲ್ಲಿ ತೆಗೆದುಕೊಳ್ಳಲು ಅವರು ಸಶಕ್ತರಾಗುತ್ತಾರೆ.

ಈ ಎಲ್ಲ ವಿಷಯಗಳಿಗೆ ಯಾರೂ ಏನೂ ಆಕ್ಷೇಪ ಮಾಡುವುದಿಲ್ಲ. ಆದರೆ ಇವೆಲ್ಲವೂ ನಮ್ಮ ಇಹಜೀವನದ ಬೃಹತ್ ಸಮಸ್ಯೆಯಾದ 'ಸಂಸಾರಬಂಧನ'ದ ಅಂಚನ್ನು ಮಾತ್ರ ಮುಟ್ಟಿವೆ ಎಂದು ಹೇಳಬಹುದು. ಮೇಲೆ ಹೇಳಿದ ಎಲ್ಲ ಬಂಧನಗಳ ಮೂಲವಿರುವುದು ಈ 'ಸಂಸಾರಬಂಧನ'ದಲ್ಲಿ. ಒಮ್ಮೆ ಈ ಸಂಸಾರಬಂಧನ ಕಳಚಿಬಿದ್ದರೆ, ಉಳಿದ ಎಲ್ಲ ಬಂಧನಗಳೂ ತಾವಾಗಿಯೇ ಬಿದ್ದುಹೋಗುವುವು. ಆಧ್ಯಾತ್ಮಿಕ ಚಿಂತನೆ ಮತ್ತು ಸಾಧನೆಯನ್ನು ಮಾಡಿದಾಗ ಮಾತ್ರ ಆಧ್ಯಾತ್ಮಿಕ ಬೆಳಕು ಬರುವುದು. ಆಗ ಮಾತ್ರ ಸಂಸಾರಬಂಧನದಿಂದ ಮುಕ್ತಿ.

ಸ್ವಾಮಿ ವಿವೇಕಾನಂದರು ಆಧುನಿಕ ಮಾನವನ ಮನಸ್ಸಿನ ಸ್ಥಿತಿಯನ್ನು ತಮ್ಮ ಅಂತರ್ದೃಷ್ಟಿಯಿಂದ ಕಂಡುಕೊಂಡರು; ನಾಲ್ಕು ಯೋಗಗಳನ್ನು ಸಮನ್ವಯ ಮಾಡಿ ಸಾಧನೆ ಮಾಡಿದರೆ ಮಾತ್ರ ಅಂತಹ ಸಾಧನೆ ಅತ್ಯಂತ ಫಲಕಾರಿಯಾಗಿ ಎಲ್ಲ ರೀತಿಯ ಬಂಧನದಿಂದ ನಮ್ಮನ್ನು ಬಿಡುಗಡೆ ಮಾಡುವುದು ಎಂದು ಸಾರಿದರು. ಅವರು ತಮ್ಮ ಪ್ರಸಿದ್ಧ 'ರಾಜಯೋಗ' ಗ್ರಂಥದಲ್ಲಿ ಹೀಗೆ ಹೇಳಿದ್ದಾರೆ: **"ಪ್ರತಿಯೊಂದು ಆತ್ಮನಲ್ಲಿಯೂ ದಿವ್ಯತೆ ಹುದುಗಿರುವುದು. ಈ ಸುಪ್ತವಾದ ದಿವ್ಯತೆಯನ್ನು ಬಾಹ್ಯ ಮತ್ತು ಆಂತರಿಕ ಪ್ರಕೃತಿಯ ನಿಗ್ರಹದಿಂದ ವ್ಯಕ್ತಗೊಳಿಸುವುದೇ ಜೀವನದ ಗುರಿ. ಇದನ್ನು 'ಕರ್ಮಯೋಗ'ದಿಂದಾಗಲಿ, 'ಭಕ್ತಿಯೋಗ'ದಿಂದಾಗಲಿ, 'ರಾಜಯೋಗ' ದಿಂದಾಗಲಿ, 'ಜ್ಞಾನಯೋಗ'ದಿಂದಾಗಲಿ, ಯಾವುದಾದರೂ ಒಂದು ಮಾರ್ಗದಿಂದ ಅಥವಾ ಎಲ್ಲ ಮಾರ್ಗಗಳ ಸಂಯೋಗದಿಂದಾಗಲಿ ಸಾಧಿಸಿ ಮುಕ್ತರಾಗಿ. ಇದೇ ಧರ್ಮದ ಸರ್ವಸ್ವ. ಸಿದ್ಧಾಂತ, ನಂಬಿಕೆ, ಬಾಹ್ಯಾಚಾರ, ಪವಿತ್ರ ಗ್ರಂಥ, ದೇವಸ್ಥಾನ, ವಿಗ್ರಹ – ಇವೆಲ್ಲ ಗೌಣ."**

## ಜಗದ್–ಹಿತ

ಮನೋವಿಜ್ಞಾನಿಗಳು ಮಾನವನನ್ನು 'ಸಂಘಜೀವಿ'ಯೆಂದು ಕರೆಯುತ್ತಾರೆ. ಮಾನವರು ಗುಂಪುಗುಂಪಾಗಿ ಸಮಾಜದಲ್ಲಿ ಜೀವಿಸುವುದು ರೂಢಿಯಾಗಿ ಬಂದಿರುವ ವಿಷಯ. ಶತಶತಮಾನಗಳಿಂದ ಇದೇ ವಾಡಿಕೆಯಾಗಿ, ತಾನು ಜೀವಿಸುತ್ತಿರುವ ಗುಂಪುಗಳಿಗೆ ತಾನು ಮಾಡಬೇಕಾದ ಕರ್ತವ್ಯ, ಅದರ ಋಣಭಾರದಿಂದ ತಪ್ಪಿಸಿಕೊಳ್ಳಲು ಮಾಡಬೇಕಾದ ಕಾರ್ಯ – ಇವೇ ಮುಂತಾದುವುಗಳು ಒಡಗೂಡಿದ 'ಸಾಮಾಜಿಕ ಪ್ರಜ್ಞೆ'ಗೆ ಸಹಜವಾಗಿ ಎಡೆ ಮಾಡಿಕೊಟ್ಟಿತು. ಭಗದ್ಗೀತೆಯು, "ಮಾನವರು ಮತ್ತು ದೇವತೆಗಳು ಪರಸ್ಪರ ಒಳಿತಿಗಾಗಿ ಒಟ್ಟಿಗೆ ಕಾರ್ಯಪ್ರವೃತ್ತರಾಗಬೇಕು" ಎಂದು ಆದೇಶಿಸಿದೆ (ಗೀತಾ ೩–೧೧). ಈ ಉಪದೇಶವು ಮಾನವ ಗುಂಪುಗಳಿಗೂ ಅನ್ವಯಿಸುತ್ತದೆ. ಯಾವೊಬ್ಬ ವ್ಯಕ್ತಿಯು ಯಾವುದೇ ಹಂತದಲ್ಲಿ ಅಥವಾ ಜೀವನದಲ್ಲಿರುವ ಹಲವಾರು ವಿಭಾಗಗಳಲ್ಲಿ, ಯಾವುದಾದರೂ ಒಂದು ಭಾಗದಲ್ಲಿ ಬಿಡುಗಡೆ ಪಡೆದರೆ ಸಾಲದು. ಅವನು ತನ್ನ ಈ ಮುಕ್ತಿಯನ್ನು ಸಮಾಜದ ಒಳಿತಿಗಾಗಿ, ಇತರರಿಗೆ ಇರುವ ಪ್ರತಿಬಂಧಕಗಳ ನಿವಾರಣೆಗಾಗಿ ಕೂಡ ಬಳಸಬೇಕು. ಉದಾಹರಣೆಗೆ, ಯಾರು ರೋಗದಿಂದ ಮುಕ್ತರಾಗಿ ಆರೋಗ್ಯ ಪಡೆದು ಪುನಃ ಶಕ್ತಿವಂತನಾಗುತ್ತಾನೆಯೋ, ಅವನು ಇತರ ರೋಗಿಗಳ ಸೇವೆ ಮಾಡಿ, ಅವರೂ ಸಹ ಪುನಃ ಆರೋಗ್ಯ ಮತ್ತು ಶಕ್ತಿಯನ್ನು ಪಡೆಯಲು ಸಹಾಯ ಮಾಡಬೇಕು. ಯಾರು ಆರ್ಥಿಕವಾಗಿ ಚೆನ್ನಾಗಿದ್ದಾರೋ, ಅವರು ಹಣದ ಅಗತ್ಯವಿರುವವರಿಗೆ ಧನಸಹಾಯ ಮಾಡಬೇಕು. ಯಾರು ಒಳ್ಳೆಯ ಶಿಕ್ಷಣ ಪಡೆದಿರುವರೋ ಅವರು ಇತರರಲ್ಲಿರುವ ಅಜ್ಞಾನ, ಮೂಢ ನಂಬಿಕೆಗಳನ್ನು ನಿರ್ಮೂಲನೆ ಮಾಡಲು ಸಹಾಯ ಮಾಡಬೇಕು. ಹಾಗೆಯೇ ಅಂಥವರ ಸಾಮಾಜಿಕ ಉನ್ನತಿಗಾಗಿ ಕೂಡ ಪ್ರಯತ್ನಿಸಬೇಕು. ಈ ನಿಟ್ಟಿನಲ್ಲಿ ನೈತಿಕ ಮತ್ತು ಆಧ್ಯಾತ್ಮಿಕವಾಗಿ ಬೆಳಕನ್ನು ಪಡೆದವರು ಅತಿ ಹೆಚ್ಚಿನ ಹೊಣೆ ಹೊರಬೇಕಾಗುತ್ತದೆ. ಅವರು ಈ ಭೂಮಿಯ ಋಣಿಗಳು. ಅವರು ಇತರರಿಗೆ ಮಾರ್ಗದರ್ಶಿಗಳಾಗಬೇಕು; ಸ್ಫೂರ್ತಿ ನೀಡಬೇಕು; ಸಮಾಜದ ಎಲ್ಲರೂ ನಿಜವಾದ ಅರ್ಥದಲ್ಲಿ ಮಾನವರಾಗಲು ಅಂಥವರು ಸಹಾಯ ಮಾಡಬೇಕು. ಅಂತಹ ಜ್ಞಾನಿಗಳು ಸಮಾಜದಲ್ಲಿಯೇ ಇದ್ದರೆ, ಅವರು ಈ ಕಾರ್ಯವನ್ನು ಮಾಡದೇ ಇರಲಾರರು. ಏಕೆಂದರೆ ವಿಶ್ವಕರುಣೆಯೇ ಅಂತಹ ಜ್ಞಾನಿಗಳ ಸಹಜ ಲಕ್ಷಣ.

## ಉಪಸಂಹಾರ

ಸ್ವಾಮಿ ವಿವೇಕಾನಂದರು ನಮಗೆ ನೀಡಿದ ಮೇಲಿನ ಮಹತ್ವದ ಸೂತ್ರವನ್ನು ಇನ್ನೂ ಹೆಚ್ಚು ವಿಸ್ತಾರವಾಗಿ ವಿಶ್ಲೇಷಿಸಲು ಸಾಧ್ಯವಿದೆಯೆಂಬುದನ್ನು ನಾವು ನೋಡಿದೆವು. ಹಾಗೆಯೇ ಅದನ್ನು ಜೀವನದ ಎಲ್ಲ ಭಾಗಗಳಿಗೂ ಅನ್ವಯ ಮಾಡಬಹುದೆಂಬುದನ್ನೂ ತಿಳಿದೆವು. ಪ್ರಸಕ್ತ ಭಾರತಕ್ಕೆ ಈ ಸಂದೇಶ ಅತ್ಯವಶ್ಯವಾಗಿದೆ. ಜಗತ್ತಿನ ಇತರ ದೇಶಗಳು – ಬಡ, ವಿಕಾಸಶೀಲ, ವಿಕಸಿತ ದೇಶಗಳು ಸಹ – ಈ ಸಂದೇಶದಿಂದ ಅತಿ ಹೆಚ್ಚಿನ ಪ್ರಯೋಜನ ಪಡೆಯಬಹುದು. ಆದರೆ ಇದರ ಸಂಪೂರ್ಣ ಹೊಣೆಗಾರಿಕೆ ಭಾರತೀಯರ ಮೇಲಿದೆ. ಅವರು ಈ ಹೊಣೆಗಾರಿಕೆ ಹೊರಲು ಸಿದ್ಧರಿರುವರೆಂದು ಆಶಿಸೋಣವೆ?

(**ಅನುವಾದ :** ಎನ್.ಪ್ರಭಾಕರ್)



# ಪಶುಪಕ್ಷಿಗಳೊಡನೆ ಶ್ರೀರಾಮಕೃಷ್ಣರು

ಸ್ವಾಮಿ ರಾಘವೇಶಾನಂದ

**ಅವತಾರಪುರುಷರು ಸಕಲ ಜೀವರಾಶಿಗಳಿಗೂ ಮುದವನ್ನು ನೀಡುತ್ತಾರೆ; ಅನುಕಂಪವನ್ನು ಹರಿಸುತ್ತಾರೆ; ಅನುಗ್ರಹವನ್ನು ಕರುಣಿಸುತ್ತಾರೆ. ರಾಮಕೃಷ್ಣಾವತಾರವೂ ಅದಕ್ಕೆ ಅಪವಾದವಲ್ಲ. ಶ್ರೀರಾಮಕೃಷ್ಣರು ಮತ್ತು ಪ್ರಾಣಿವರ್ಗದ ನಡುವೆ ಇದ್ದ ಆತ್ಮೀಯ ಸಂಬಂಧವನ್ನು ತಿಳಿಯಾದ ಭಾಷೆಯಲ್ಲಿ, ನವಿರಾಗಿ ನಮಗೆ ತಿಳಿಸಿಕೊಟ್ಟಿರುವ ಸ್ವಾಮೀಜಿಯವರು ಬೆಳಗಾವಿಯ ರಾಮಕೃಷ್ಣ ಮಿಷನ್ ಆಶ್ರಮದ ಮುಖ್ಯಸ್ಥರು. ಹಲವಾರು ಪುಸ್ತಕಗಳನ್ನು ರಚಿಸಿರುವ ಸ್ವಾಮೀಜಿಯವರು ಉತ್ತಮ ವಾಗ್ಮಿಗಳು ಮತ್ತು ಸಂಘಟನಾಚತುರರು.**

**ಮನುಷ್ಯ, ಪ್ರಾಣಿ :** ಈ ಲೇಖನದ ಶೀರ್ಷಿಕೆ ಸ್ವಲ್ಪ ವಿನೋದವಾಗಿ ಕಾಣಬಹುದು. ಪಶು–ಪಕ್ಷಿಗಳೊಡನೆ ಶ್ರೀರಾಮಕೃಷ್ಣರು ಮಾಡಬೇಕಾದುದೇನು? ಭಗವಂತ ಅವತರಿಸುವುದು ಬರಿಯ ಮನುಷ್ಯರಿಗಾಗಿ ಅಲ್ಲ! ಜಗತ್ತಿನ ಎಲ್ಲಾ ಜೀವಿಗಳಿಗಾಗಿ ಅವನು ಅವತರಿಸುತ್ತಾನೆ. ಅಲ್ಲದೇ ಮನುಷ್ಯನೂ ಒಂದು ಪ್ರಾಣಿ ತಾನೇ. ಆಂಗ್ಲಭಾಷೆಯಲ್ಲಿ ಮನುಷ್ಯನನ್ನು 'Thinking Animal' ಅಂದರೆ 'ಮನುಷ್ಯ ಒಂದು ಯೋಚಿಸುವ ಪ್ರಾಣಿ' ಎಂದು ಕರೆಯುತ್ತಾರೆ, ಅಷ್ಟೆ. ಹಾಗೆ ನೋಡಿದರೆ ಪಾಪ, ಪ್ರಾಣಿಗಳೇ ಮನುಷ್ಯರಿಗಿಂತ ಎಷ್ಟೋ ಮೇಲು ಅಲ್ಲವೇ? ಯಾರೋ ವ್ಯಕ್ತಿ ಒಬ್ಬರು ಹರಿಕಥೆದಾಸರನ್ನು ಕೇಳಿದನಂತೆ, "ದಾಸರೇ, ನೀವು ಏಕೆ ಯಾವಾಗಲೂ ಮನುಷ್ಯರಿಗೇ ಉಪದೇಶ ಮಾಡುತ್ತೀರಿ? ಪಾಪ, ಪ್ರಾಣಿಗಳಿಗೂ ಉಪದೇಶ ಮಾಡಿದಲ್ಲಿ ಅವೂ ಬೇಗ ವಿಕಾಸ ಹೊಂದಬಹುದಲ್ಲ?" ಅದಕ್ಕೆ ದಾಸರು ಹೇಳಿದರಂತೆ, "ನಿನ್ನ ವಿಚಾರವೇನೋ ಚೆನ್ನಾಗಿದೆ. ಆದರೆ ನಿಜವಾಗಿ ಉಪದೇಶ ಮನುಷ್ಯರಿಗೆ ಬೇಕೋ ಅಥವಾ ಪ್ರಾಣಿಗಳಿಗೋ ಎಂದು ಸ್ವಲ್ಪ ಚಿಂತಿಸಿನೋಡೋಣ. ಉದಾಹರಣೆಗೆ ಯಾವುದಾದರೂ ಎಮ್ಮೆ ತನ್ನ ಹಾಲಿಗೆ ತಾನೇ ನೀರು ಬೆರೆಸುತ್ತದೆಯೇ? ಅದು ಕೊಟ್ಟ ಹಾಲಿಗೆ ನೀರು ಬೆರಸಿ ಜನರನ್ನು ಮೋಸ ಮಾಡುವುದು ಮನುಷ್ಯನೋ ಇಲ್ಲವೇ ಪ್ರಾಣಿಯೋ? ಆದುದರಿಂದಲೇ ಹರಿಕಥೆಯ ಉಪಯೋಗ ಪಡೆಯಬೇಕಾಗಿರುವುದು ಮನುಷ್ಯನೇ ಹೊರತು ಪ್ರಾಣಿಯಲ್ಲ." ಅದಿರಲಿ, ಭಗವಂತ ಮನುಷ್ಯನ ರೂಪದಲ್ಲಿ ಅವತಾರವೆತ್ತಿ ಬಂದಾಗ ಪಶುಪಕ್ಷಿಗಳೂ ಮನುಷ್ಯನಂತೆಯೇ ತಮ್ಮ ಪಾತ್ರವನ್ನು ವಹಿಸಿ, ಅವನ ವಿಶೇಷ ಕೃಪೆಗೆ ಪಾತ್ರರಾಗುತ್ತವೆ. ಇದನ್ನೇ ಇಲ್ಲಿ ನಿರೂಪಿಸಿರಲು ಹೊರಟಿರುವುದು.

**ಪ್ರಾಣಿಗಳ ರೂಪದಲ್ಲಿ ಅವತಾರಗಳು :** ಈ ವಿಷಯ ಹೊಸದೇನಲ್ಲ. ನಮ್ಮ ಪುರಾಣಗಳು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಭಗವಂತನು ಬರಿಯ ಮನುಷ್ಯರ ರೂಪದಲ್ಲಲ್ಲ, ಪ್ರಾಣಿಗಳ ರೂಪದಲ್ಲಿಯೂ ಅವತಾರವೆತ್ತುತ್ತಾನೆ ಎಂದು ಸಾರುತ್ತವೆ. ಮತ್ಸ್ಯಾವತಾರ, ವರಾಹಾವತಾರ, ಕೂರ್ಮಾವತಾರ, ಅಷ್ಟೇಕೆ ಅರ್ಧ ಮನುಷ್ಯ, ಅರ್ಧ ಸಿಂಹದ ಆಕಾರವಿರುವ ನರಸಿಂಹಾವತಾರ – ಇವೆಲ್ಲ ಇದಕ್ಕೆ ಉದಾಹರಣೆಗಳು. ಉಪನಿಷತ್ತಿನಲ್ಲಿ ಒಬ್ಬ ಋಷಿಗೆ ಎತ್ತು, ಹಂಸ ಮುಂತಾದವು ಮನುಷ್ಯನಂತೆ ಮಾತನಾಡಿ, ಬ್ರಹ್ಮಜ್ಞಾನವನ್ನು ಉಪದೇಶಿಸುವುದನ್ನು ಕಾಣುತ್ತೇವೆ. ಶ್ರೀರಾಮಕೃಷ್ಣಾವತಾರವೂ ಇದಕ್ಕೆ ಅಪವಾದವಲ್ಲ. ಶ್ರೀರಾಮಕೃಷ್ಣರು ಅವತಾರವೆತ್ತಿ ಬಂದಾಗ ಮನುಷ್ಯ, ಪ್ರಾಣಿಗಳು, ಪಕ್ಷಿಗಳು, ಅಷ್ಟೇಕೆ ಇಡೀ ಜಗತ್ತಿನ ಜೀವರಾಶಿಗಳೇ ಅವರ ಕರೆಗೆ ಓಗೊಟ್ಟು, ಧನ್ಯರಾಗಿದ್ದನ್ನು ಕಾಣುತ್ತೇವೆ.

**ಶ್ರೀರಾಮಕೃಷ್ಣರ ಹನುಮಾನ್ ಭಾವ :** ನಮ್ಮ ಈ ನಿರೂಪಣೆಯನ್ನು ಶ್ರೀರಾಮಕೃಷ್ಣರ ಹನುಮಾನ್ ಭಾವದಿಂದ ಆರಂಭಿಸೋಣ. ಇದರ ಆರಂಭವನ್ನು ಶ್ರೀರಾಮಕೃಷ್ಣರ ಬಾಲ್ಯದಿಂದಲೇ ಕಾಣುತ್ತೇವೆ. ನಮಗೆಲ್ಲಾ ರಾಮಾಯಣದಲ್ಲಿ ಶ್ರೀರಾಮನಿಗೂ ಹನುಮಂತನಿಗೂ ಎಂತಹ ಆಪ್ತ ಸಂಬಂಧವಿತ್ತು ಎಂಬುದು ತಿಳಿದಿದೆ. ಶ್ರೀರಾಮನು ಶ್ರೀರಾಮಕೃಷ್ಣರ ಮನೆದೇವರು. ಬಾಲ್ಯದಿಂದಲೂ ಶ್ರೀರಾಮಕೃಷ್ಣರಿಗೆ ಶ್ರೀರಾಮನ ಭಂಟನಾದ ಹನುಮಂತನ ಮೇಲೆ ವಿಶೇಷ ಒಲವಿತ್ತು. ಅವರು ಐದು ವರ್ಷ ವಯಸ್ಸಿನವರಾಗಿದ್ದಾಗ, ಒಮ್ಮೆ ಅವರ ಸೋದರಮಾವನ ಮನೆಯಾದ ಮಯಾಪುರಕ್ಕೆ ತಮ್ಮ ತಾಯಿಯೊಡನೆ ಹೊರಟಿದ್ದರು. ಹೊಲದ ಮಧ್ಯೆ ನಡೆದು ಹೋಗುತ್ತಿದ್ದಾಗ ಕಪ್ಪುಮೂತಿಯ ಕಪಿಗಳ ದೊಡ್ಡ ಗುಂಪೊಂದನ್ನು ಅವರು ಎದುರಿಸಬೇಕಾಯಿತು. ಆಶ್ಚರ್ಯವೆಂದರೆ ಬಾಲಕ ಗದಾಧರ ಸ್ವಲ್ಪವೂ ಹೆದರದೆ ಅವುಗಳೊಡನೆ ಆಟವಾಡಲಾರಂಭಿಸಿದ. ಅವು ಕೂಡ ತಮ್ಮ ಕ್ರೂರತನವನ್ನಾಗಲಿ, ಚೇಷ್ಟೆಯನ್ನಾಗಲಿ ತೋರಿಸದೆ ಅವನನ್ನು ತಮ್ಮವನೆಂದೇ ಭಾವಿಸಿ ಆಟವಾಡತೊಡಗಿದವು. ಇದರಿಂದ ಅವನ ತಾಯಿಗೆ ಅತ್ಯಾಶ್ಚರ್ಯವಾಯಿತು. ಗದಾಧರ ಆಗಾಗ ರಾಮಾಯಣವನ್ನು ಓದಿ ಹೇಳಿ, ಹಳ್ಳಿಗರನ್ನೆಲ್ಲಾ ಸಂತೋಷಪಡಿಸುತ್ತಿದ್ದ. ಒಂದು ದಿನ ಎಲ್ಲಿಂದಲೋ ಒಂದು ಕೋತಿ ಬಂದು, ಹತ್ತಿರದ ಮರದ ಮೇಲೆ ಕುಳಿತು ಬಹಳ ಉತ್ಸಾಹದಿಂದ ರಾಮಾಯಣವನ್ನು




ಕೇಳುತ್ತಿತ್ತು. ಪಠಣ ಮುಗಿದು ಎಲ್ಲರೂ ಹೋದ ಮೇಲೆ ಅದು ಗದಾಧರನ ಕಾಲಿನ ಬಳಿ ಬಂದು ಮೌನವಾಗಿ ಕುಳಿತುಕೊಂಡಿತು. ಮುಂದೆ ಗದಾಧರ ರಾಮಾಯಣದ ಪುಸ್ತಕವನ್ನು ಅದರ ತಲೆಯ ಮೇಲಿಟ್ಟು ಆಶೀರ್ವದಿಸಿದ. **ಯತ್ರ ಯತ್ರ ರಘುನಾಥ ಕೀರ್ತನಂ ತತ್ರ ತತ್ರ ಕೃತಮಸ್ತಕಾಂಜಲಿಂ** ಎಂದು ತುಲಸೀದಾಸರು ಹೇಳುತ್ತಾರೆ. ಅಂದರೆ ಎಲ್ಲೆಲ್ಲಿ ಶ್ರೀರಾಮನ ಸ್ಮರಣೆ ನಡೆಯುತ್ತಿದೆಯೋ, ಅಲ್ಲೆಲ್ಲಾ ಅಂಜಲಿಬದ್ಧನಾಗಿ ಹನುಮಂತ ಕುಳಿತಿರುತ್ತಾನೆ ಎಂದು. ಹೀಗಾಗಿ, ಇಲ್ಲಿಯೂ ಕೂಡ ಆಂಜನೇಯಸ್ವಾಮಿಯೇ ಆ ಕಪಿಯ ರೂಪ ದಲ್ಲಿ ಬಂದಿದ್ದನೇ!

**ಕುಂಬಳಕಾಯಿ ಪಲ್ಯ :** ಮುಂದೆ ಯುವಕರಾದಾಗ ಶ್ರೀರಾಮಕೃಷ್ಣರು ದಕ್ಷಿಣೇಶ್ವರದಲ್ಲಿ ಹಲವಾರು ಕಠೋರ ಸಾಧನೆಗಳಲ್ಲಿ ತೊಡಗಿದರು. ಪ್ರತಿಯೊಂದು ಸಾಧನೆಯಲ್ಲೂ ವಿಜಯ ಪಡೆದರು. ಆ ಕಠೋರ ಸಾಧನೆಗಳಿಂದ ಅವರ ದೇಹ ಅತಿ ದುರ್ಬಲ ವಾಯಿತು. ತಮ್ಮ ಆರೋಗ್ಯವನ್ನು ಸುಧಾರಿಸಿಕೊಳ್ಳಲು, ಹುಟ್ಟೂರಾದ ಕಾಮಾರಪುಕುರಕ್ಕೆ ಹೋದರು. ಅಲ್ಲಿದ್ದಾಗ ತಮ್ಮ ಸೋದರಳಿಯ ಹೃದಯನೊಡನೆ ಅವನ ಸ್ವಂತ ಹಳ್ಳಿಯಾದ ಸಿಹೋರಿಗೆ ಹೋಗಿ ಅಲ್ಲಿ ಕೆಲದಿನಗಳನ್ನು ಕಳೆದರು. ಒಂದು ದಿನ ಅವರಿಗೆ ಕುಂಬಳಕಾಯಿಯ ಪಲ್ಯವನ್ನು ತಿನ್ನಬೇಕೆಂದು ತುಂಬಾ ಇಚ್ಛೆಯಾಗಿ, ಹೃದಯನಲ್ಲಿ ತಮ್ಮ ಇಚ್ಛೆಯನ್ನು ವ್ಯಕ್ತಪಡಿಸಿದರು. ಅದು ಕುಂಬಳಕಾಯಿ ಬೆಳೆಯುವ ಕಾಲವಾಗಿರಲಿಲ್ಲ. ಆದರೂ ಇಬ್ಬರೂ ಹಳ್ಳಿಯಲ್ಲೆಲ್ಲಾ ಹುಡುಕಲಾರಂಭಿಸಿದರು. ಕೊನೆಗೆ ಒಬ್ಬ ಹೆಂಗಸಿನ ಗುಡಿಸಿಲಿನ ಮೇಲೆ ಒಂದು ಕುಂಬಳಕಾಯಿಯ ಬಳ್ಳಿ ಹರಡಿಕೊಂಡಿದ್ದುದನ್ನು ಕಂಡರು. ಅದರ ಮೂಲೆಯಲ್ಲಿ ಒಂದು ಕುಂಬಳಕಾಯಿ ಜೋತಾಡುತ್ತಿತ್ತು. ಅದನ್ನು ನೋಡಿ ಹೃದಯ ಆ ಮನೆಯ ಹೆಂಗಸಿಗೆ ಅದನ್ನು ಕೊಡಲು ಕೇಳಿದ. ಆದರೆ ಅವಳು, ಅದು ಇನ್ನೂ ಸರಿಯಾಗಿ ಬಲಿತಿಲ್ಲದೇ ಇರುವುದರಿಂದ ಕೊಡಲು ಒಪ್ಪಲಿಲ್ಲ. ನಿರಾಶೆಯಿಂದ ಇಬ್ಬರೂ ಹಿಂತಿರುಗುತ್ತಿದ್ದರು. ಎಲ್ಲಿಂದಲೋ ಕೋತಿಯೊಂದು ಬಂದು ಅದನ್ನು ಕಿತ್ತುತಂದು, ಹೃದಯನ ಬಳಿ ಇಟ್ಟು ಓಡಿಹೋಯಿತು. ಇಬ್ಬರೂ ಬಹಳ ಆಶ್ಚರ್ಯದಿಂದ ಅದನ್ನು ತೆಗೆದುಕೊಂಡು ಹೋದರು. ಭಗವಂತನ ಲೀಲೆಗಳು ಅತ್ಯದ್ಭುತ, ಅಲ್ಲವೇ?!

**ಶ್ರೀರಾಮಕೃಷ್ಣರ ದಾಸ್ಯಭಾವ:** ಶ್ರೀರಾಮಕೃಷ್ಣರ ದಾಸ್ಯಭಾವದ ಸಾಧನೆಯನ್ನು ನೆನಪಿಸಿಕೊಳ್ಳೋಣ. ಹನುಮಂತನಿಗಿದ್ದ ಅನನ್ಯ ಭಕ್ತಿ ಯಿಂದಲೇ ಶ್ರೀರಾಮಚಂದ್ರನ ದರ್ಶನವಾಗುವುದು ಸಾಧ್ಯ ಎಂಬ ನಿಶ್ಚಯದಿಂದ ಅವರು ದಾಸ್ಯಭಾವದಲ್ಲಿ ಸಾಧನೆ ಮಾಡತೊಡಗಿದರು. ತಮ್ಮನ್ನು ಹನುಮಂತನೆಂದು ಕಲ್ಪಿಸಿಕೊಂಡು ಆ ಭಾವದಲ್ಲಿ ಎಷ್ಟೊಂದು ತನ್ಮಯರಾಗಿದ್ದರೆಂದರೆ, ತಮಗಿದ್ದ ಪ್ರತ್ಯೇಕ ಅಸ್ತಿತ್ವವನ್ನೇ ಮರೆತುಬಿಟ್ಟಿದ್ದರು. ಅವರೇ ಮುಂದೆ ಹೀಗೆ ಹೇಳುತ್ತಿದ್ದರು: "ಆ ಸಮಯದಲ್ಲಿ ನನ್ನ ಆಹಾರ ವಿಹಾರಗಳೆಲ್ಲಾ ಹನುಮಂತನಂತೆಯೇ ಇರುತ್ತಿದ್ದವು. ನಾನು ಉದ್ದೇಶಪೂರ್ವಕವಾಗಿ ಹಾಗೇನೂ ಮಾಡುತ್ತಿರಲಿಲ್ಲ. ತಾನೇತಾನಾಗಿ ನನ್ನ ರೀತಿ ನೀತಿಗಳು ಬದಲಾಗಿದ್ದವು. ನಾನು ಒಂದು ಬಟ್ಟೆಯನ್ನು ಒಂದು ಬಾಲ ಇಳಿಬೀಳುವಂತೆ ಸೊಂಟಕ್ಕೆ ಕಟ್ಟಿಕೊಳ್ಳುತ್ತಿದ್ದೆ. ನೆಗೆಯುತ್ತ ನಡೆಯುತ್ತಿದ್ದೆ. ಕಂದಮೂಲಫಲಾದಿಗಳನ್ನಲ್ಲದೆ ಬೇರೇನನ್ನೂ ತಿನ್ನುತ್ತಿರಲಿಲ್ಲ. ಅದನ್ನೂ ಸಿಪ್ಪೆ ತೆಗೆಯದೆ ತಿಂದುಬಿಡುತ್ತಿದ್ದೆ. ಮರದ ಮೇಲೆಯೇ ಹೆಚ್ಚು ಸಮಯ ಕಳೆಯುತ್ತಿದ್ದೆ ಮತ್ತು ಯಾವಾಗಲೂ 'ರಘುವೀರ ರಘುವೀರ' ಎಂದು ಉಚ್ಚರಿಸುತ್ತಿದ್ದೆ. ಇನ್ನೊಂದು ಆಶ್ಚರ್ಯದ ವಿಷಯವೇನೆಂದರೆ ನನ್ನ ಬೆನ್ನೆಲುಬಿನ ಕೆಳಭಾಗದಲ್ಲಿ ಮೂಳೆಯು ಒಂದು ಇಂಚು ಮುಂದೆ ಬಂದಿತ್ತು."